ಡೆತ್ ಸರ್ಟಿಫಿಕೇಟ್ ಪಡೆದುಕೊಳ್ಳುವುದಕ್ಕೆ ಮುಂಚಿತವಾಗಿಯೇ ಹೊರ ದೇಶದಿಂದ ದೇಹವನ್ನು ಸ್ವದೇಶಕ್ಕೆ ವಾಪಾಸು ತರಿಸಲು ಎಲ್ಲೂ ಅಡ್ವಾನ್ಸ್ ಬುಕ್ಕಿಂಗಿನ ಅವಕಾಶಗಳೇ ತೆರೆದುಕೊಳ್ಳದ ತಾಂತ್ರಿಕ ದೋಷ ಮೊದಲ ಬಾರಿ ಗಮನಕ್ಕೆ ಬಂದು ತನ್ನ ಅಪಾರ ಪ್ರೀತಿಯ ತಂತ್ರಜ್ಞಾನದ ಮಿತಿ ಕಂಡು ದಂಗಾದ.

ಬುಧವಾರ ಬರುವಷ್ಟರಲ್ಲಿ ಗೋಡೆಯ ಗಡಿಯಾರದ ಅವಶ್ಯಕತೆಯಿಲ್ಲದೇ ನಿಮಿಷಕೊಮ್ಮೆ ಎಚ್ಚರದ ಗಂಟೆ ಮನದೊಳಗೆ ಮೊಳಗಿ, ಅವನನ್ನು ಜಾಗೃತಗೊಳಿಸುತ್ತಿತ್ತು. ಮಧ್ಯಾಹ್ನದವರೆಗೂ ಕಳೆಯಬೇಕಾದರೆ ಸಾಕುಬೇಕಾಯಿತು. ಕೈಕಾಲಿನಲ್ಲಿ ನಡುಕ ಶುರುವಾಗಿ, ಮನಸ್ಸು ಸಂಪೂರ್ಣ ಸ್ತಿಮಿತ ಕಳೆದುಕೊಂಡಂತೆನ್ನಿಸಿ, ಆಫೀಸಿನಲ್ಲಿ ಕೂರುವುದೂ ಕಷ್ಟವೆನ್ನಿಸಿತು. ಕೂತಲ್ಲಿ, ನಿಂತಲ್ಲಿ ಅವನ ಕಣ್ಣು ಸದಾ ಮೊಬೈಲ್‌ನ ಟೈಮಿನತ್ತ ಗಳಿಗೆಗೊಮ್ಮೆ ಹಾಯುತ್ತಿದ್ದು, ಒಂದೊಂದು ನಿಮಿಷ ಕಳೆಯುವುದೂ ದುಸ್ಸಾಧ್ಯವೆನ್ನಿಸಿ ಇನ್ನಿಲ್ಲದಷ್ಟು ಉದ್ವೇಗಗೊಂಡ.

ಸಮಯ ಜಾರುತ್ತಿದೆ! ಸಮಯ ಜಾರುತ್ತಿದೆ! ಹೌದು ಜಾರುತ್ತಿರುವುದು ಸಮಯ ಮಾತ್ರ! ಅಂದುಕೊಂಡಿದ್ದಕ್ಕಿಂತ ವೇಗವಾಗಿ!

ಕೆಲವೊಮ್ಮೆ ಆಫೀಸಿನಲ್ಲಿ ಕೆಲಸದ ನಡುವೆ ಬೋರಾದಾಗಲೆಲ್ಲಾ ಯಾವ್ಯಾವುದೋ ಸೈಟ್ ತೆರೆದುಕೊಂಡು ಸಂಚಾರ ಮಾಡುತ್ತಾ ಸಮಯ ತಳ್ಳುತ್ತಿದ್ದದ್ದನ್ನು ನೆನೆದ. ಅದೆಷ್ಟು ಸಮಯವಿತ್ತಲ್ಲಾ! ಸೊಳ್ಳೆ ಹೊಡೆಯಲು, ಆಕಳಿಸಲು, ಚಾಟ್ ಮಾಡಲು, ಜಿಮ್‌ನಲ್ಲಿ ವರ್ಕೌಟ್ ಮಾಡಲು, ಕ್ಯಾಂಟೀನ್‌ನಲ್ಲಿ ಗಂಟೆಗಟ್ಟಲೆ ಕಾಫಿ ಹೀರಲು, ಕಾರಿಡಾರಿನಲ್ಲಿ ನಿಂತು ಪ್ರಾಜೆಕ್ಟ್ ಡಿಸ್ಕಸ್ ಮಾಡಲು, ಟೀಮ್ ಔಟಿಂಗ್‌ನಲ್ಲಿ ಅನಾವಶ್ಯಕ ತಲೆ ಕೆಡಿಸಿಕೊಂಡು ಯಾರ್‍ಯಾರನ್ನೋ ಇಂಪ್ರೆಸ್ ಮಾಡಲು, ಶನಿವಾರ, ಭಾನುವಾರಗಳಲ್ಲಿ ದೇವಸ್ಥಾನಕ್ಕೆ ಹೋದಷ್ಟು ಉತ್ಸಾಹದಲ್ಲಿ ಮಾಲ್‌ಗಳಲ್ಲಿ ಸುತ್ತಿ ಬೇಡದ ಗ್ಯಾಜೆಟ್‌ಗಳನ್ನೆಲ್ಲಾ ಎತ್ತಿ, ಮಗುಚಿ ತಣ್ಣಗೆ ಮನೆಗೆ ಬಂದು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಲು, ಲ್ಯಾಪ್‌ಟಾಪ್‌ನಲ್ಲಿ ಬೇಡದ ಸಿನಿಮಾಗಳಿಗಾಗಿ ಗಂಟೆಗಟ್ಟಲೆ ನೆಟ್‌ನಲ್ಲಿ ಜಾಲಾಡಿ ಪೈರೆಸಿಯಲ್ಲಿ ಭಟ್ಟಿಯಿಳಿಸಿಕೊಳ್ಳಲು, ಹೊತ್ತಿನ ಪರಿವೆಯಿಲ್ಲದೆ ದಿನವಿಡೀ ಗೇಮ್ಸ್ ಆಡಲು, ಸುಮ್ಮನೆ ಉದ್ರೇಕಗೊಳ್ಳುತ್ತಾ ಪೋರ್ನೋಗ್ರಾಫ್ ನೋಡಲು...

ಸ್ವಲ್ಪ ಹೊತ್ತು ಮನೆಯಲ್ಲಿ ಕುಳಿತು ಕಾಲ ದೂಡುವುದೂ ಎಷ್ಟು ದುಸ್ಸಾಧ್ಯವೆನ್ನಿಸುತ್ತಿತ್ತು! ಹೇಗೆ ಹೇಗೋ ಸಮಯ ಕಳೆಯುತ್ತಿದ್ದ ಅವನಿಗೆ ಇದ್ದಕ್ಕಿದ್ದಂತೆ ಸಮಯ ತನ್ನ ಸುತ್ತಾ ಪರಿಧಿ ಹಾಕಿ ಬಂಧಿಸುತ್ತಿದೆ ಅನ್ನಿಸುತ್ತಿದ್ದಂತೆ ಉಸಿರು ಸಿಕ್ಕಿಹಾಕಿಕೊಂಡಂತೆನ್ನಿಸಿ, ತಾನಿನ್ನೂ ಉಸಿರಾಡುತ್ತಿದ್ದೇನಲ್ಲವಾ ಎಂದು ಒಮ್ಮೆ ಜೋರಾಗಿ ಉಸಿರಾಡಿ ಪರೀಕ್ಷಿಸಿಕೊಂಡ. ಇನ್ನುಳಿದ ತನ್ನ ಬದುಕಿನ ಇಡೀ ಲೆಕ್ಕಾಚಾರ ಆ ಮುಳ್ಳಿನ ಗತಿಯನ್ನು ಅನುಸರಿಸುವಂತಹದ್ದು. ಒಂದು ಸೆಕೆಂಡೂ ತಾನಿನ್ನು ವ್ಯರ್ಥವಾಗಿ ವ್ಯಯಿಸದೆ ಆ ಕಾಲಚಕ್ರದಡಿಯಲ್ಲೇ ಕಳೆಯಬೇಕು, ಕಳೆಯಬೇಕು, ಕಳೆಯಬೇಕು!

ಪ್ರತಿ ಆಲೋಚನೆಯ ಕೊನೆ ಸಮಯದೊಂದಿಗೆ ಕೊಂಡಿ ಹೊಸೆದುಕೊಂಡು ಸಮಾಪ್ತಿಯಾಗುತ್ತಿತ್ತಲ್ಲದೆ, ನೂರಾಅರವತ್ತೆಂಟು ಗಂಟೆಗಳಲ್ಲಿ ಇನ್ನು ಕೆಲವೇ ಗಂಟೆಗಳಷ್ಟೇ ಉಳಿದಿವೆ ಎಂದು ಪ್ರತಿ ಕ್ಷಣ ಜ್ಞಾಪಿಸುತ್ತಿದ್ದದ್ದನ್ನು ಕಂಡು, ಇಷ್ಟು ವರುಷ ಅದು ಹೇಗೆ ತನ್ನ ಗಮನಕ್ಕೇ ಬಂದಿರಲಿಲ್ಲ ಎಂಬ ವಿಷಾದದೊಂದಿಗೆ ಬೆರಗುಗೊಂಡ. ಜೊತೆಗೆ ಇದುವರೆಗೂ ತಾನು ಹಾಕುತ್ತಿದ್ದ ತನ್ನ ಅಂತಿಮ ಲೆಕ್ಕಾಚಾರ ಎಲ್ಲೋ ತಪ್ಪುತ್ತಿದೆಯೆಂಬ ಸಣ್ಣ ಚಡಪಡಿಕೆ ಶುರುವಾಗಿದ್ದೇ, ತಾನು ಪಟ್ಟಿ ಮಾಡಿದ್ದ್ಯಾವುದೂ ಮೊದಲ ಆದ್ಯತೆಗೆ ಅರ್ಹವಲ್ಲವೆಂಬ